**2023-24**

**ಗ.ಅಂಕಗಳು:80** **ವಿಷಯ: ಸಮಾಜ ವಿಜ್ಞಾನ –(85K)** **ಒಟ್ಟು ಪ್ರಶ್ನೆಗಳು:38**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ,ಕ್ರಮಾಕ್ಷರದೊಂದಿಗೆ ಬರೆಯಿರಿ.** **8 × 1 = 8**

1. ಬಾಂಬೆಯನ್ನು ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟವನು

A. ಸರ್. ಥಾಮಸ್ ರೋ B. ಒಂದನೆಯ ಚಾರ್ಲ್ಸ್

C. ಒಂದನೆಯ ಜೇಮ್ಸ್ D. ಎರಡನೇ ಚಾರ್ಲ್ಸ್

2. ಆಂಗ್ಲೋ-ಒರಿಯಂಟಲ್ ಕಾಲೇಜನ್ನು ಸ್ಥಾಪಿಸಿದವರು

A. ಮಹಾತ್ಮ ಜ್ಯೋತಿಭಾ ಫುಲೆ B. ಸರ್ ಸಯ್ಯದ್ ಅಹಮದ್ ಖಾನ್

C. ಆನಿಬೆಸೆಂಟ್ D. ಸ್ವಾಮಿ ದಯಾನಂದ ಸರಸ್ವತಿ

3. ಅಸ್ಪೃಶ್ಯತೆಯನ್ನು ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದವರು

A. ರಾಮ್ ಮೋಹನ್ ರಾಯ B. ಡಾ.ಬಿ.ಆರ್.ಅಂಬೇಡ್ಕರ್

C. ಪಂಪ D. ಮಹಾತ್ಮ ಗಾಂಧೀಜಿ

4. ಸಂಘಟಿತ ಕೆಲಸಗಾರರಿಗೆ ಉದಾಹರಣೆ

A. ಮನೆಕೆಲಸಗಾರರು B. ವಿಮಾ ಕಂಪನಿಯ ಕೆಲಸಗಾರರು

C. ಗೃಹ ನಿರ್ಮಾಣದ ಕೂಲಿಕಾರರು D. ಕೃಷಿ ಕಾರ್ಮಿಕರು

5. 1929ರಲ್ಲಿ ಮೊಟ್ಟಮೊದಲು ಆರ್ಥಿಕ ಯೋಜನೆಗಳನ್ನು ಜಾರಿಗೊಳಿಸಿದ ದೇಶ

A. ಸೋವಿಯತ್ ರಷ್ಯಾ B. ಅಮೇರಿಕಾ ಸಂಯುಕ್ತ ಸಂಸ್ಥಾನ

C. ಇಂಗ್ಲೆಂಡ್ D. ಚೀನಾ

6. ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯುವ ಏಳು ಹಂತಗಳಲ್ಲಿ ಕೊನೆಯ ಹಂತ

A. ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು

B. ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು

C. ಪ್ರಾರಂಭಿಕ ಠೇವಣಿ ನೀಡುವುದು

D. ಪ್ರಸ್ತಾವನೆ ಅರ್ಜಿ ತುಂಬುವುದು

7. ಜಂಬಿಟ್ಟಿಗೆ (ಲ್ಯಾಟ್‌ರೈಟ್) ಮಣ್ಣು ಕೆಂಪು ಬಣ್ಣವನ್ನು ಹೊಂದಿರುವುದು ಏಕೆಂದರೆ

A. ಅತಿ ಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದಿಂದ ಮಣ್ಣು ಬದಲಾಗುವುದರಿಂದ

B. ಅಧಿಕ ಮಳೆಯಿಂದ ಮಣ್ಣಿನಲ್ಲಿರುವ ಖನಿಜಾಂಶಗಳು ತೊಳೆಸಲ್ಪಡುವುದರಿಂದ

C. ಅಗ್ನಿ ಶಿಲೆಗಳ ಶಿಥಿಲೀಕರಣದಿಂದ

D. ಕೊಳೆತ ಜೈವಿಕಾಂಶಗಳನ್ನು ಅಧಿಕ ಪ್ರಮಾಣದಲ್ಲಿ ಹೊಂದಿರುವುದರಿಂದ

8. ಪಂಚವಾರ್ಷಿಕ ಯೋಜನೆಯ ಕರಡಿಗೆ ಅನುಮೋದನೆ ನೀಡುವವರು

A. ನೀತಿ ಆಯೋಗ B. ಯೋಜನಾ ಆಯೋಗ

C. ರಾಷ್ಟ್ರೀಯ ಅಭಿವೃದ್ಧಿ ಮಂಡಳಿ D. ರಾಷ್ಟ್ರೀಯ ಯೋಜನಾ ಮಂಡಳಿ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8 × 1 = 8**

9. ಮೊದಲ ಕಾರ್ನಾಟಿಕ್ ಯುದ್ಧವು ಯಾವ ಒಪ್ಪಂದದೊಂದಿಗೆ ಮುಕ್ತಾಯವಾಯಿತು?

10. ವೆಲ್ಲೆಸ್ಲಿಯಿಂದ ಕಂಪೆನಿಯ ಸಾಲದ ಹೊರೆ ಹೆಚ್ಚಿತು.ಏಕೆ?

11. ಭಾರತದ ಧೋರಣೆಯ ವಿರುದ್ಧ ಟಿಬೇಟನ್ನು ವಶಪಡಿಸಿಕೊಂಡ ದೇಶ ಯಾವುದು?

12. ಪೂರ್ವಾಗ್ರಹ ಎಂದರೇನು?

13. ಬ್ಯಾಂಕುಗಳ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆ ಯಾವುದು?

14. ಪ್ರಾದೇಶಿಕವಾದದ ಅರ್ಥ ಬರೆಯಿರಿ.

15. ಮರುಭೂಮಿ ಮಣ್ಣಿನಲ್ಲಿ ಬೇಗ ಆರ್ದ್ರತೆ ಕಡಿಮೆ ಆಗುತ್ತದೆ.ಏಕೆ?

16. ಭಾರತ ಮತ್ತು ನೇಪಾಳ ದೇಶಗಳ ಸಹಭಾಗಿತ್ವದಲ್ಲಿ ರೂಪುಗೊಂಡ ನದಿ ಕಣಿವೆ ಯೋಜನೆ ಯಾವುದು?

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8 × 2 = 16**

17. ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧದ ನಂತರ ಮೈಸೂರಿನ ಆಡಳಿತದಲ್ಲಿ ವ್ಯವಸ್ಥೆಯಲ್ಲಿ ಉಂಟಾದ ಬದಲಾವಣೆಗಳೇನು?

18. ಲಾಭಕೋರತನಕ್ಕೆ ಇರುವ ಮುಖ್ಯ ಕಾರಣಗಳನ್ನು ತಿಳಿಸಿ.

ಅಥವಾ

ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧ್ಯವ್ಯ ಹದಗೆಡಲು ಕಾರಣಗಳಾವುವು?

19. ಭಾರತದಲ್ಲಿ ಅಸ್ಪೃಶ್ಯತಾ ಆಚರಣೆ ವಿರುದ್ಧ ಹೋರಾಟ ಮಾಡಿದ ಮಹನೀಯರ ಹೆಸರನ್ನು ತಿಳಿಸಿ

ಅಥವಾ

ನಿರುದ್ಯೋಗದ ಪರಿಣಾಮಗಳನ್ನು ಪಟ್ಟಿ ಮಾಡಿ.

20. ಪಂಚವಾರ್ಷಿಕ ಯೋಜನೆಯ ಉದ್ದೇಶಗಳನ್ನು ತಿಳಿಸಿ.

21. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು ಯಾವುವು?

22. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

23. ಬಕ್ಸಾರ್ ಕದನವು ಭಾರತದಲ್ಲಿ ಬ್ರಿಟಿಷರ ಆಡಳತವನ್ನು ಭಧ್ರಪಡಿಸಿತು.ಹೇಗೆ?

24. ಭಾರತದ ವ್ಯವಸಾಯವನ್ನು “ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ” ಎಂದು ಕರೆಯುತ್ತಾರೆ.ಏಕೆ?

**IV. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 9 × 3 = 27**

25. ಮೊದಲ ಆಂಗ್ಲೋ-ಮರಾಠ ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.

26. ಆರ್ಯ ಸಮಾಜದ ಕೊಡುಗೆಗಳನ್ನು ಪಟ್ಟಿ ಮಾಡಿ.

ಅಥವಾ

ಚಿಕ್ಕದೇವರಾಜ ಒಡೆಯರ್ ಅವರ ಸಾಧನೆಗಳನ್ನು ತಿಳಿಸಿ.

27. ಅಮೇರಿಕಾ ಮತ್ತು ಭಾರತದ ನಡುವಿನ ಸಂಬಂಧವನ್ನು ವಿಶ್ಲೇಷಿಸಿ.

28. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು?

29. ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟಬಹುದು?

30. ದೇಶದಲ್ಲಿನ ಅರಣ್ಯ ಸಂರಕ್ಷಣೆಗೆ ಅನುಸರಿಸಬಹುದಾದ ವಿಧಾನಗಳು ಯಾವುವು?

ಅಥವಾ

ವಿವಿಧೋದ್ದೇಶ ನದಿಕಣಿವೆ ಯೋಜನೆಯ ಉದ್ದೇಶಗಳು ಯಾವುವು?

31. ಬ್ಯಾಂಕುಗಳ ಗುಣ ಲಕ್ಷಣಗಳನ್ನು ಪಟ್ಟಿ ಮಾಡಿ.

ಅಥವಾ

ಬ್ಯಾಂಕುಗಳ ವಿಧಗಳನ್ನು ಹೆಸರಿಸಿ.

32. “ಖಾಯಂ ಜಮೀನ್ದಾರಿ ಪದ್ಧತಿಯಿಂದ ರೈತರು ಬಹುಮುಖಿ ಶೋಷಣೆಗೆ ಒಳಗಾದರು”. ಈ ಹೇಳಿಕೆಯನ್ನು ಸಮರ್ಥಿಸಿ.

33. ಪಂಚವಾರ್ಷಿಕ ಯೋಜನೆಗಳಿಂದಾಗಿ ಭಾರತದ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಯಿತು.ಈ ಹೇಳಿಕೆಯನ್ನು ಸಮರ್ಥಿಸಿ.

ಅಥವಾ

ಭಾರತದಲ್ಲಿ ಅನುಸರಿಸಲಾದ ನವೀನ ವಿಧಾನಗಳು ಹಸಿರು ಕ್ರಾಂತಿಗೆ ಪ್ರೇರಣೆಯಾದವು. ಹೇಗೆ?

**V. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರ ಬರೆಯಿರಿ.** 4 × 4 = 16

34. ನ್ಯಾಯಾಂಗ ಮತ್ತು ಪೊಲೀಸ್ ವ್ಯವಸ್ಥೆಯಲ್ಲಿ ಬ್ರಿಟಿಷರು ಜಾರಿಗೊಳಿಸಿದ ಸುಧಾರಣೆಗಳು ಯಾವುವು?

ಅಥವಾ

ಸಂಗೊಳ್ಳಿ ರಾಯಣ್ಣನ ಸಾಧನೆಗಳನ್ನು ವಿವರಿಸಿ.

35. ಆನಿಬೆಸೆಂಟರು ಜಾರಿಗೊಳಿಸಿದ ಸುಧಾರಣಾ ಕ್ರಮಗಳು ಯಾವುವು?

36. ನಿತ್ಯ ಹರಿದ್ವರ್ಣದ ಅರಣ್ಯಗಳು ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳಿಗಿಂತ ಭಿನ್ನವಾಗಿವೆ.ಹೇಗೆ?

37. ಭ್ರಷ್ಟಾಚಾರದ ನಿಯಂತ್ರಣವು ಸಮರ್ಪಕ ಕ್ರಮಗಳಿಂದ ಮಾತ್ರ ಸಾಧ್ಯ. ಸಮರ್ಥಿಸಿ

**VI. 38.ಭಾರತದ ನಕ್ಷೆಯನ್ನು ಬರೆದು,ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.** **1 + 4 = 5**

A. 23 1/2° ಉತ್ತರ ಅಕ್ಷಾಂಶ B. ಪಾಕ್ ಜಲಸಂಧಿ

C. ಕೋಸಿ ನದಿ D. ಭಾಕ್ರಾನಂಗಲ್ ಯೋಜನೆ

*******************************